# ಮಿರರ್‌ಲೆಸ್ ಹಾಗೂ ಟ್ರಾವೆಲ್ ಕ್ಯಾಮೆರಾ




**ಪ್ರತಿವರ್ಷ ಆಗಸ್ಟ್ 19ರಂದು 'ವಿಶ್ವ ಕ್ಯಾಮೆರಾ ದಿನ'ವನ್ನು ಆಚರಿಸಲಾಗುತ್ತಿದೆ. ಈ ನೆಪದಲ್ಲಿ, ಇತ್ತೀಚೆಗೆ ಪ್ರವಾಸಿಗರ ಮಧ್ಯೆ ಜನಪ್ರಿಯಗೊಂಡಿರುವ ಎರಡು ಕ್ಯಾಮೆರಾಗಳ ಬಗ್ಗೆ ಹೀಗೊಂದು ವಿಶ್ಲೇಷಣೆ.**

■ ಚಿತ್ರ– ಲೇಖನ:
**ಹರೀಶ್ ಹಳೆಮನೆ**



**ಕ್ಯಾ**ಮೆರಾ ಹೊಂದಿರುವ ಸ್ಮಾರ್ಟ್‌ಫೋನ್‌ಗಳ ಜನಪ್ರಿಯತೆಯಿಂದಾಗಿ 'ಪಾಯಿಂಟ್ & ಶೂಟ್' ಕಾಂಪ್ಯಾಕ್ಟ್ ಕ್ಯಾಮೆರಾಗಳ ಮಾರಾಟ ಇಳಿಮುಖವಾಗಿದೆ ಎನ್ನುವ ಅಭಿಪ್ರಾಯವಿದೆ. ಹವ್ಯಾಸಿಗಳು ಕೂಡ ಸಾಮಾನ್ಯ ಕಾಂಪ್ಯಾಕ್ಟ್ ಕ್ಯಾಮೆರಾಗಳನ್ನು ಇಷ್ಟಪಡುವುದಿಲ್ಲ ಎಂಬಂತಹ ಸ್ಥಿತಿ ಇದೆ. ಎಸ್‌ಎಲ್‌ಆರ್ ಕ್ಯಾಮೆರಾಗಳು ಪ್ರವಾಸದ ವೇಳೆ ಕೊಂಡೊಯ್ಯಲು ಸ್ವಲ್ಪ ಭಾರ. ಈ ಹಿನ್ನೆಲೆಯಲ್ಲಿ ಇತ್ತೀಚೆಗೆ ಮಿರರ್‌ಲೆಸ್ ಕ್ಯಾಮೆರಾಗಳು ಹಾಗೂ ಟ್ರಾವೆಲ್ ಕ್ಯಾಮೆರಾಗಳು ವಿಶ್ವದ ಕ್ಯಾಮೆರಾ ಮಾರುಕಟ್ಟೆಯಲ್ಲಿ ತಮ್ಮ ಸ್ಥಾನವನ್ನು ಗಟ್ಟಿಗೊಳಿಸುವತ್ತ ದಾಪುಗಾಲು ಹಾಕುತ್ತಿವೆ. ಈ ಮಾದರಿ ಕ್ಯಾಮೆರಾಗಳು ಈಗ ಜನಪ್ರಿಯ.

ಮಿರರ್‌ಲೆಸ್ ಕ್ಯಾಮೆರಾಗಳು

ಮಾಮೂಲಿ ಕಾಂಪ್ಯಾಕ್ಟ್ ಕ್ಯಾಮೆರಾಗಳಿಗಿಂತ ಹೆಚ್ಚಿನ ಗಾತ್ರ ಹಾಗೂ ಡಿಎಸ್‌ಎಲ್‌ಆರ್ ಕ್ಯಾಮೆರಾವನ್ನು ಸರಿಗಟ್ಟುವ ಗುಣಮಟ್ಟ ಮಿರರ್‌ಲೆಸ್ ಕ್ಯಾಮೆರಾಗಳ ವೈಶಿಷ್ಟ್ಯ. ವೃತ್ತಿಪರ ಛಾಯಾಗ್ರಾಹಕರು ಕೂಡಾ ಇವುಗಳನ್ನು ಇಷ್ಟಪಡುತ್ತಿದ್ದಾರೆ. ಕಳೆದ ಮೂರ್ನಾಲ್ಕು ವರ್ಷಗಳಲ್ಲಿ ಮಿರರ್‌ಲೆಸ್ ಅಥವಾ ಸಿಎಸ್‌ಸಿ (ಕಾಂಪಾಕ್ಟ್ ಸಿಸ್ಟಮ್ ಕ್ಯಾಮೆರಾ) ಎಂಬ ಕ್ಯಾಮೆರಾ ಮಾದರಿಗಳು ಜನಪ್ರಿಯವಾಗತೊಡಗಿವೆ.

ಡಿಎಸ್‌ಎಲ್‌ಆರ್ ಕ್ಯಾಮೆರಾ ನೋಡಿದವರಿಗೆ ಶಟರ್ ಕ್ಲಿಕ್ ಮಾಡುತ್ತಿದ್ದಂತೆ ಮೇಲಕ್ಕೇರುವ ಕನ್ನಡಿಯನ್ನು ನೋಡಿ ಗೊತ್ತಿರಬಹುದು. ಮಿರರ್‌ಲೆಸ್ ಮಾದರಿಗಳಲ್ಲಿ ಈ ಕನ್ನಡಿ ಇಲ್ಲ. ಇವುಗಳ ಲೆನ್ಸ್‌ಅನ್ನು ಕಳಚಿ ಡಿಎಸ್‌ಎಲ್‌ಆರ್ ಕ್ಯಾಮೆರಾಗಳಂತೆಯೇ ಬದಲಿಸಬಹುದು. ಇವುಗಳಿಗೆ ಇಂಟರ್‌ಚೇಂಜೇಬಲ್ ಲೆನ್ಸ್ ಕಾಂಪ್ಯಾಕ್ಟ್ ಕ್ಯಾಮೆರಾ (ಐಎಲ್‌ಸಿಸಿ), ಕಾಂಪ್ಯಾಕ್ಟ್ ಸಿಸ್ಟಮ್ ಕ್ಯಾಮೆರಾ (ಸಿಎಸ್‌ಸಿ) ಮುಂತಾದ ಹೆಸರುಗಳಿವೆ. ಒಲಿಂಪಸ್ ಬಿಡುಗಡೆಗೊಳಿಸಿದ 'ಪೆನ್' ಹೆಸರಿನ ಮಿರರ್‌ಲೆಸ್ ಮಾದರಿಗಳು ಜನಪ್ರಿಯವಾಗಲಿಲ್ಲ. ಸೋನಿ, ಫ್ಯೂಜಿ, ಪ್ಯಾನಾಸಾನಿಕ್ ಮುಂತಾದ ಕಂಪೆನಿಗಳೂ ಈ ಮಿರರ್‌ಲೆಸ್ ಹಾಗೂ ಟ್ರಾವೆಲ್ ಮಾದರಿಗಳನ್ನು ಬಿಡುಗಡೆಗೊಳಿಸಿ ಯಶಸ್ವಿಯಾದವು.

ಕಾಂಪ್ಯಾಕ್ಟ್ ಕ್ಯಾಮೆರಾಗಳ ಸೆನ್ಸರ್‌ಗೆ ಹೋಲಿಸಿದರೆ ಮಿರರ್‌ಲೆಸ್ ಕ್ಯಾಮೆರಾಗಳ ಸೆನ್ಸರ್ ಗಾತ್ರ ಸ್ವಲ್ಪ ದೊಡ್ಡದು. ಕೆಲವು ಮಾದರಿಗಳಲ್ಲಂತೂ ಡಿಎಸ್‌ಎಲ್‌ಆರ್ ಕ್ಯಾಮೆರಾಗಳ ಸೆನ್ಸರ್‌ಗಳನ್ನೇ ಬಳಸಿದ್ದಾರೆ. ಸೆನ್ಸರ್ ಗಾತ್ರ ದೊಡ್ಡದಾದ ಕಾರಣ ಲಭ್ಯ ಬೆಳಕಿನ ಛಾಯಾಗ್ರಹಣ ಇವುಗಳಲ್ಲಿ ಸುಲಭ. ಚಿತ್ರದ ಗುಣಮಟ್ಟದಲ್ಲಿ ಕೊರತೆಯೇನೂ ಇಲ್ಲ.

ಮಿರರ್‌ಲೆಸ್ ಕ್ಯಾಮೆರಾಗಳು ಹಗುರವಾಗಿದ್ದು, ಎಸ್‌ಎಲ್‌ಆರ್ ಕ್ಯಾಮೆರಾಗಳ ಗುಣಮಟ್ಟ ಹೊಂದಿವೆ. ಹಾಗಾಗಿ ಹೋಗುವೆಲ್ಲೆಡೆ ಕೊಂಡೊಯ್ಯಲು ಸಾಧ್ಯ. ಚಿತ್ರಗಳ ಪ್ರಿವ್ಯೂ ಮೊದಲೇ ಸಿಗುವುದರಿಂದ ನಮಗೆ ಬೇಕಾದಂತೆ ವೈಟ್ ಬ್ಯಾಲನ್ಸ್ ಮುಂತಾದವನ್ನು ಬದಲಾಯಿಸಲು ಸಾಧ್ಯ. ಉತ್ತಮ ವಿಡಿಯೋ ರೆಕಾರ್ಡಿಂಗ್ ಕೂಡ ಇರುವ ಕಾರಣ ಇತ್ತೀಚೆಗೆ ಜನಪ್ರಿಯವಾಗುತ್ತಿವೆ. ಮಾಮೂಲಿ ಕಾಂಪ್ಯಾಕ್ಟ್ ಕ್ಯಾಮೆರಾಗಳಿಗಿಂತ ಸ್ವಲ್ಪವೇ ಹೆಚ್ಚು ಗಾತ್ರದಲ್ಲಿ ಎಸ್‌ಎಲ್‌ಆರ್ ಕ್ಯಾಮೆರಾಗಳ ಗುಣಮಟ್ಟಕ್ಕೆ ಸಾಟಿ.

ಪ್ರವಾಸೀ ಛಾಯಾಗ್ರಾಹಕರಿಗೆ ಹಾಗೂ ಪತ್ರಕರ್ತರಿಗೆ ಹೇಳಿ ಮಾಡಿಸಿದಂತಹ ಕ್ಯಾಮೆರಾಗಳಿವು. ಉತ್ತಮ ಗುಣಮಟ್ಟದ 'ಸ್ಟ್ರೀಟ್' ಹಾಗೂ 'ಕ್ಯಾಂಡಿಡ್' ಚಿತ್ರಗಳನ್ನು ಇದರಲ್ಲಿ ಸೆರೆ ಹಿಡಿಯಬಹುದು. ಭೂದೃಶ್ಯಗಳಿಗಂತೂ ಸೂಪರ್. ಇದೇ ಕಾರಣಗಳಿಂದಾಗಿ ಒಲಿಂಪಸ್, ಸೋನಿ ಹಾಗೂ ಫ್ಯೂಜಿಫಿಲ್ಮ್ ಕಂಪೆನಿಗಳ ಮಿರರ್‌ಲೆಸ್ ಮಾದರಿಗಳು ವಿದೇಶಗಳಲ್ಲಿ ಬಹಳ ಜನಪ್ರಿಯ ಆಗುತ್ತಿವೆ.

**ಮಿರರ್‌ಲೆಸ್ ಕ್ಯಾಮೆರಾಗಳಲ್ಲಿ ಜನಪ್ರಿಯವಾಗುತ್ತಿರುವ ಕೆಲವು ಮಾದರಿಗಳು ಹೀಗಿವೆ:**

- ★ ಒಲಿಂಪಸ್‌ನ ಓಎಂಡಿ ಹಾಗೂ ಪೆನ್ ಸರಣಿಯ ಕ್ಯಾಮೆರಾಗಳು
- ★ ಕ್ಯಾನನ್ ಇಓಎಸ್ ಎಂ ಸರಣಿಯ ಕ್ಯಾಮೆರಾಗಳು
- ★ ಸೋನಿ ಆಲ್ಫಾ ಸರಣಿಯ ಕೆಲವು ಕ್ಯಾಮೆರಾಗಳು